॥ ಶ್ರೀಃ ಪಾಯಾತ್ ॥ ಶ್ರೀಃ ॥ ಪಾಯಾತ್ ಶ್ರೀಃ ॥

ಯದ್ವದ್ರೌ ರಮಯಾ ನಿತ್ಯಂ ಜಗದ್ರಕ್ಷಣದೀಕ್ಷಿತಃ ।
ಯೋ ಜಾಗರ್ತಿ ಪರಸ್ಸ್ವಕ್ಷಾತ್ಸನೋ ನಾರಾಯಣೋವತು ॥

**ಮೈಸೂರು ಸರ್ಕಾರದ ವಿದ್ಯಾ ಮತ್ತು ನ್ಯಾಯಾಂಗ ಇಲಾಖೆಗಳ ಸಚಿವವರ್ಯರಾದ ಮಾನನೀಯ**
**ಶ್ರೀಯುತ ಎ. ಜಿ. ರಾಮಚಂದ್ರರಾವ್ ಬಿ. ಎ., ಬಿ. ಎಲ್., ರವರ ದಿವ್ಯ ಸನ್ನಿಧಾನದಲ್ಲಿ**

**ತಿರುನಾರಾಯಣಪುರಂ, ಮೇಲುಕೋಟೆಯಲ್ಲಿರುವ ಶ್ರೀ ಯದುಶೈಲ ಪ್ರೌಢಶಾಲೆಯ ಕಾರ್ಯನಿರ್ವಾಹಕ ಸಮಿತಿಯ**
**ಅಧ್ಯಕ್ಷರು ವಿನಯಪುರಸ್ಸರವಾಗಿ ಸಮರ್ಪಿಸಿದ**

# ಬಿನ್ನವತ್ತಳೆ

ಸ್ವಾಮಿ,

ದಕ್ಷಿಣ ಬದರಿಕಾಶ್ರಮವಾದ ತಿರುನಾರಾಯಣಪುರಂ ಮೇಲುಕೋಟೆ ಎಂಬುದು ಈ ಭರತಖಂಡದಲ್ಲೇ ಸುಪ್ರಸಿದ್ಧ ಪುಣ್ಯಕ್ಷೇತ್ರವಾಗಿದೆ. ಇಲ್ಲಿ ಸಂಸ್ಕೃತ ಕಾಲೇಜು, ಬಾಲಕ ಬಾಲಕಿಯರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು ಏರ್ಪಟ್ಟು ಸುಮಾರು ಅರವತ್ತು ವರ್ಷಗಳ ಮೇಲಾಗಿದೆ. ನಾಲ್ಕಾರು ಮೈಲಿಗಳ ಅಂತರದಲ್ಲಿರುವ ಹಳ್ಳಿಹಳ್ಳಿಗೂ ಪ್ರೌಢಶಾಲೆಗಳನ್ನು ಸರ್ಕಾರವು ಕರುಣಿಸುತ್ತಾ ಇರುವ ಈ ಸುಸಮಯದಲ್ಲೂ ಸುಪ್ರಸಿದ್ಧ ವಿದ್ಯಾಕೇಂದ್ರವಾದ ಈ ಕ್ಷೇತ್ರಕ್ಕೇ ಪ್ರೌಢವಿದ್ಯಾಶಾಲೆಯು ಇಲ್ಲದಿರುವುದು ಇಲ್ಲಿಯ ಮತ್ತು ಅಕ್ಕಪಕ್ಕಗ್ರಾಮನಿವಾಸಿಗಳ ದೌರ್ಭಾಗ್ಯವೆಂದೆಣಿಸಿ, ಹ್ಯಾಗಾದರೂ ಮಾಡಿ ಖಾಸಗಿಯಾಗಿ ಪ್ರೌಢಶಾಲೆಯೊಂದನ್ನು ಸ್ಥಾಪಿಸಬೇಕೆಂದು ಸಾರ್ವತ್ರಿಕ ಮಹಾಜನಗಳ ಪ್ರಾರ್ಥನೆಯ ಮೇಲೆ ೧೯೫೦ನೆಯ ಸಾಲಿನಲ್ಲೇ **"ಶ್ರೀ ಯದುಶೈಲ ಹೈಸ್ಕೂಲ್"** ಎಂಬ ಅಭಿಧಾನದಿಂದ ಈ ಪ್ರೌಢಶಾಲೆಯನ್ನು ತೆರೆಯಲಾಯಿತು. ಇಲ್ಲಿಯ ಸರ್ವವಿಧವಾದ ಏಳಿಗೆಗೂ ಸಾಧಕವಾಗಿ ಇಲ್ಲಿ ಸ್ಥಾಪಿಸಲ್ಪಟ್ಟಿರುವ **"ದಿವ್ಯದೇಶ ಜೀರ್ಣೋದ್ಧಾರಕ ಭಕ್ತಮಂಡಲಿ"** ಎಂಬ ಧರ್ಮಸಂಸ್ಥೆಯವರು ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಎರಡುಸಾವಿರದ ಒಂದು ರೂಪಾಯಿಗಳನ್ನು ಸಹಕರಿಸಿ ಶಾಲಾರಂಭಕ್ಕೆ ಸಹಾಯ ನೀಡಿದರು. ಈ ಶಾಲೆಯು ೨೫ ವಿದ್ಯಾರ್ಥಿಗಳಿಂದ ಆರಂಭವಾಯಿತು. ಈಗ ಪ್ರೌಢಶಾಲೆಯ ಒಂದು ಎರಡು ಮತ್ತು ಮೂರನೇ ತರಗತಿಗಳು ತೆರೆಯಲ್ಪಟ್ಟು ಪಾಠಪ್ರವಚನಗಳು ನಡೆಸಲ್ಪಡುತ್ತಿವೆ. ಆರ್ಥಿಕ ಸೌಕರ್ಯವಿಲ್ಲದೆ ಶಾಲೆಯನ್ನು ಮುಂದುವರಿಸುವುದು ಸುಗಮವಲ್ಲವೆಂಬುದು ತಮ್ಮ ಚಿತ್ತಕ್ಕೆ ಅರಿಯದ ವಿಷಯವಲ್ಲ. ಅಕ್ಕಪಕ್ಕದ ಗ್ರಾಮ ನಿವಾಸಿಗಳಲ್ಲಿ ಈ ಶ್ರಮವನ್ನು ಸಮ್ಮೇಳನಗಳನ್ನು ಸೇರಿಸಿ ವಿಜ್ಞಾಪಿಸುವುದು ಮೊದಲಾದ ಕ್ರಮಗಳಿಂದ ಉದಾರ ಹೃದಯದಿಂದ ಸಹಕರಿಸಲು ಪ್ರಾರ್ಥಿಸಲಾಯಿತು. ಅವರುಗಳಿಗೂ ವಿಶಾಲ ಹೃದಯವಿದ್ದರೂ ಕಾಲಧರ್ಮದಿಂದ ಆರ್ಥಿಕ ಮುಗ್ಗಟ್ಟು ಉಂಟಾಗಿ ಯಾರೂ ಮುಂದುವರಿದು ಬರಲಾಗದೆ ಹೋಗಿರುವರೆಂದು ಊಹಿಸಬೇಕಾಗಿದೆ. ಒಟ್ಟಿನಲ್ಲಿ ಅಂತಹ ಉಪಪನ್ನರು ಯಾರೂ ಅಕ್ಕಪಕ್ಕ ಗ್ರಾಮಗಳಲ್ಲಿರುವಂತೆಯೂ ತೋರಲಿಲ್ಲ. ವಿದ್ಯಾರ್ಥಿ ವೇತನದಿಂದಲೂ ಮೇಲ್ಕಂಡ ಭಕ್ತಮಂಡಲಿಯ ಪರಿಪೂರ್ಣವಾದ ಅವಲಂಬನದಿಂದಲೂ ಪ್ರಕೃತ ಶಾಲೆಯೇನೋ ಬಹು ಶ್ರಮದಿಂದ ಮುಂದುವರಿಯುತ್ತಾ ಇದೆ. ನ್ಯಾಯಾಂಗ ಸಚಿವವರ್ಯರು ತಾ|| ೨೪-೨-೧೯೫೧ರಲ್ಲಿ ಇಲ್ಲಿಗೆ ದಯಮಾಡಿಸಿದ್ದಾಗ ನಮ್ಮ ಶಾಲೆಯ ಪರಿಸ್ಥಿತಿಯನ್ನು ಅರಿಕೆಮಾಡಿ ಸರ್ಕಾರಿ ಗ್ರಾಂಟಿಗೆ ಶಿಫಾರ್ಸು ಮಾಡಬೇಕೆಂದು ಪ್ರಾರ್ಥಿಸಿದ್ದೆವು. ಮುಂದಿನ ಸಾಲಿಗೆ ಸಹಕರಿಸಲು ಉದ್ಯಮ ನಡೆಸುವುದಾಗಿ ಅಭಯವಿತ್ತಿದ್ದರು.

ಇತ್ತೀಚೆಗೆ, ತಾ|| ೨೦-೧೨-೧೯೫೨ರಲ್ಲೂ ನಮ್ಮ ಸರ್ಕಾರದ ರೆವಿನ್ಯೂ ಮತ್ತು ಮುಜರಾಯಿ ಇಲಾಖೆಗಳ ಸಚಿವವರ್ಯರಾದ ಮಾನ್ಯ ಶ್ರೀಯುತ, **ಕಡಿದಾಳ್ ಮಂಜಪ್ಪ, ಬಿ.ಎ.ಎಲ್ಎಲ್.ಬಿ.** ಮಹಾಶಯರು ಇಲ್ಲಿಗೆ ದಯಮಾಡಿಸಿದ್ದಾಗ, ನಮ್ಮ ಶಾಲೆಯ ಪರಿಸ್ಥಿತಿಯನ್ನು ವಿಜ್ಞಾಪಿಸಿ ಸರ್ಕಾರಿ ಗ್ರಾಂಟಿಗೆ ಶಿಫಾರ್ಸು ಮಾಡಲು ಪ್ರಾರ್ಥಿಸಿ ಬಿನ್ನವತ್ತಳೆಯನ್ನು ಒಪ್ಪಿಸಿದೆವು, ಅವರೂ, ವಿದ್ಯಾಸಚಿವವರ್ಯರಾದ ತಮ್ಮಲ್ಲಿ ಕಲೆತು ಆಲೋಚಿಸಿ, ಈ ಸಾಲಿನಿಂದ ಸರ್ಕಾರಿ ಗ್ರಾಂಟನ್ನು ಮಂಜೂರ್ಮಾಡಿಸಿ ಸಹಕರಿಸುವುದಾಗಿ ಅಭಯವಿತ್ತು ದಯಮಾಡಿಸಿದರು.

೧) ತಮ್ಮ ಆಗಮನವೇ ಇಲ್ಲಿನ ನಮ್ಮೆಲ್ಲರಿಗೂ ಬಹುಸಂತೋಷದಾಯಕವಾಗಿದ್ದರೂ ತಮ್ಮ ಈ ಆಗಮನದ ಸವಿನೆನಪು ಎಂದೆಂದಿಗೂ ಕೃತಜ್ಞತೆಯೊಡನೆ ನಿಲ್ಲುವಂತೆ, ಬಹು ಶ್ರಮದಿಂದ ಮುಂದುವರಿಯುತ್ತಿರುವ ಮೇಲ್ಕಂಡ ನಮ್ಮ ಶ್ರೀ ಯದುಶೈಲ ಹೈಸ್ಕೂಲಿಗೆ ಈ ೧೯೫೩-೫೪ನೆಯ ಸಾಲಿನಿಂದಲಾದರೂ ಸರ್ಕಾರಿ ಗ್ರಾಂಟನ್ನು ದಯವಿಟ್ಟು ತಪ್ಪದೆ ಮಂಜೂರ್ಮಾಡಿ ಶಾಲೆಯು ಎಂದೆಂದಿಗೂ ಕೀರ್ತಿಯುತವಾಗಿ ಮುಂದುವರಿಯುವಂತೆ ಸಹಕರಿಸಿ, ಪುಣ್ಯಭಾಗಿಗಳಾಗಲು ಪ್ರಾರ್ಥಿಸುತ್ತೇವೆ.

೨) ನಮ್ಮ ಭರತಖಂಡದಲ್ಲೇ ಸುಪ್ರಸಿದ್ಧ ವಿದ್ಯಾಕೇಂದ್ರವಾದ ಇಲ್ಲಿನ ಸಂಸ್ಕೃತ ಕಾಲೇಜನ್ನು ಗೌರ್ನಮೆಂಟಿಗೇ ಸೇರಿಸಿಕೊಂಡು ಅಲ್ಲಿನ ಯಾವ ಸ್ಥಾನವನ್ನೂ ತೆಗೆಯದೆ ಗಳಿಸಿಕೊಟ್ಟು ಅಖಿಲಭಾಷಾಜನನಿಯಾದ ಗೀರ್ವಾಣ ವಾಣಿಯು ಸಂತಸದಿಂದ ನಲಿಯುವ ನರ್ತನ ರಂಗವಾಗುವಂತೆಯೂ ಮಾಡಿ, ಆರ್ಯ ಸಂಸ್ಕೃತಿಯನ್ನು ರಕ್ಷಿಸಬೇಕೆಂದು ಪ್ರಾರ್ಥಿಸುತ್ತೇವೆ.

ಆಳುವ ಮಹಾಪ್ರಭುಗಳವರಿಗೂ, ಅಖಿಲ ರಾಜಕುಟುಂಬಕ್ಕೂ, ಮಂತ್ರಿಮಂಡಲಕ್ಕೂ ಸಚಿವವರ್ಯರಾದ ತಮಗೂ ತಮ್ಮ ಪೋಷ್ಯವರ್ಗಕ್ಕೂ ಅಖಿಲ ಪ್ರಜೆಗಳಿಗೂ ಈ ಶ್ರೀ ಯದುಶೈಲಾಧೀಶನಾದ ಶ್ರೀ ಚಲುವನಾರಾಯಣಸ್ವಾಮಿಯು ಆಯುರಾರೋಗ್ಯ ಐಶ್ವರ್ಯಾದಿ ಸರ್ವ ಸನ್ಮಂಗಳಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸಿ ತಮ್ಮ ಸನ್ನಿಧಾನದಲ್ಲಿ ಈ ಬಿನ್ನವತ್ತಳೆಯನ್ನು ವಿನಯಪೂರ್ವಕವಾಗಿ ಸಮರ್ಪಿಸುತ್ತೇವೆ, ಸ್ವಾಮಿ.

ತಿರುನಾರಾಯಣಪುರಂ,
ಮೇಲ್ಕೋಟೆ,
ತಾ|| ೧೬-೨-೧೯೫೩.

**ಭಾ. ವಂ. ರಾಘವಾಚಾರ್ಯ,**
ಪ್ರೆಸಿಡೆಂಟ್,
ಶ್ರೀ ಯದುಶೈಲ ಹೈಸ್ಕೂಲ್ ಕಮಿಟಿ.

ಶ್ರೀ ವಿಜಯಲಕ್ಷ್ಮೀ ಪ್ರೆಸ್, ಮೈಸೂರು